**ಸಿ.ಸಿ. ನಂ. 5288/2022** **ಪಿ.ಡಬ್ಲ್ಯೂ-2**

**ಸಾಕ್ಷಿಗೆ ದಿನಾಂಕ 16.7.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ.ಸಿ.ಎನ್ ವಕೀಲರಿಂದಃ

ನನ್ನ ಹಾಗೂ ಆರೋಪಿತರ ತಾಯಿ ಮನೆ ಅಕ್ಕಪಕ್ಕದಲ್ಲಿರುತ್ತದೆ. ನಮ್ಮ ಮನೆಯ ಹಿಂಭಾಗಕ್ಕೆ ಹೋಗಲು ಮೊದಲು ಆರೋಪಿತರ ತಾಯಿಯ ಮನೆಯ ಮುಂಭಾಗ ಹಾದು ಹೋಗಬೇಕು ಎಂದರೆ ಸರಿಯಲ್ಲ. ಆರೋಪಿತರ ತಾಯಿಯ ಮನೆ ಮುಂಭಾಗ ಖಾಲಿ ಜಾಗ ಇರುತ್ತದೆ ಎಂದರೆ ಸರಿ. ಈಗ ನೋಡುತ್ತಿರುವ ಭಾವಚಿತ್ರದಲ್ಲಿರುವ ಎಡಭಾಗದಲ್ಲಿರುವ ಕೊಟ್ಟಿಗೆ ನನಗೆ ಸಂಬಂಧಪಟ್ಟ ಕೊಟ್ಟಿಗೆ ಎಂದರೆ ಸರಿ. ಸಾಕ್ಷಿದಾರರು ಸದರಿ ಭಾವಚಿತ್ರವನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ1 ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರದಲ್ಲಿರುವ ಬಲಭಾಗದ ಮನೆ 1 ನೇ ಆರೋಪಿಯ ತಾಯಿಯ ಮನೆ ಎಂದರೆ ಸರಿ. ಸದರಿ ಭಾವಚಿತ್ರದಲ್ಲಿರುವ ಕಾಂಪೌಂಡ್ ನಿರ್ಮಿಸುವ ಪೂರ್ವದಲ್ಲಿ ನಮ್ಮ ಕೊಟ್ಟಿಗೆಯ ನೀರು 1 ನೇ ಆರೋಪಿಯ ತಾಯಿಯ ಮನೆ ಬಳಿ ಹೋಗುತ್ತಿತ್ತು ಎಂದರೆ ಸರಿಯಲ್ಲ. ಆ ರೀತಿ ಕಾಂಪೌಂಡ್ ನಿರ್ಮಿಸುವ ಸಮಯದಲ್ಲಿ ನನ್ನ ಕೊಟ್ಟಿಗೆಗೆ ಹೋಗುವ ಜಾಗಕ್ಕೆ ತೊಂದರೆಯಾಗುತ್ತದೆ ಎಂದು ದಿನಾಂಕ 24.10.2019 ರಂದು 1 ನೇ ಆರೋಪಿಯ ತಾಯಿಯ ಜೊತೆ ಜಗಳ ಮಾಡಿರುತ್ತೇನೆ ಎಂದರೆ ಸಾಕ್ಷಿದಾರರು ಚರಂಡಿ ನೀರಿನ ವಿಚಾರದಲ್ಲಿ 1 ನೇ ಆರೋಪಿಯ ತಾಯಿ ಸಣ್ಣತಾಯಮ್ಮ ರವರು ಗಲಾಟೆ ಮಾಡಿರುತ್ತಾರೆ ಎನ್ನುವರು. ನಾನು ಸದರಿ ಸಣ್ಣತಾಯಮ್ಮ ರವರ ಮೇಲೆ ಗಲಾಟೆ ಮಾಡಿ ಹಲ್ಲೆ ಮಾಡಿದ್ದರಿಂದ ಅವರು ಹೆಚ್.ಡಿ.ಕೋಟೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನನ್ನ ವಿರುದ್ಧ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ದೂರು ನೀಡಿದ ನಂತರ ಸದರಿ ದೂರನ್ನು ತಾಲ್ಲೂಕು ದಂಡಾಧಿಕಾರಿ ರವರಿಗೆ ವರ್ಗಾಯಿಸಿದ್ದು ನಾನು ಮತ್ತು ನನ್ನ ಮನೆಯವರು ತಾಲ್ಲೂಕು ದಂಡಾಧಿಕಾರಿಯ ಮುಂದೆ ಮುಚ್ಚಳಿಕೆ ಬರೆದುಕೊಟ್ಟಿರುತ್ತೇನೆ ಎಂದರೆ ಸರಿ. ಆ ರೀತಿ ಮುಚ್ಚಳಿಕೆ ಬರೆದುಕೊಟ್ಟ ದ್ವೇಷದಲ್ಲಿ ನಾನು ಸದರಿ ಸಣ್ಣತಾಯಮ್ಮ ರವರ ವಿರುದ್ಧ ಸಣ್ಣಪುಟ್ಟ ವಿಚಾರಗಳಿಗೆ ಗಲಾಟೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿರುವುದಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಶೂಕಾಲಿನಿಂದ ಒದ್ದಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಬಿದ್ದು ಪೆಟ್ಟು ಮಾಡಿಕೊಂಡಿದ್ದು ಅದನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರುವುದಿಲ್ಲ. ನನಗೆ ವಯಸ್ಸಾಗಿರುವುದರಿಂದ ಎದೆ ನೋವು ಬಂದಿದ್ದು, ಆಸ್ಪತ್ರೆಗೆ ಚಿಕಿತ್ಸೆ ಪಡೆದಿದ್ದು ಅದನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಠಾಣೆಗೆ ನಾನು ಮತ್ತು ನಮ್ಮ ಗ್ರಾಮದವರಾದ ರಾಜನಾಯಕ ಹಾಗೂ ಮಹದೇವನಾಯಕ ರವರು ಹೋಗಿರುತ್ತೇವೆ. ಅವರು ನನ್ನ ಪರಿಚಯಸ್ಥರಾಗಿರುತ್ತಾರೆ. ನನಗೆ ಓದಲು ಬರೆಯಲು ಬರುವುದಿಲ್ಲ. ಸದರಿ ರಾಜನಾಯಕ ಹಾಗೂ ಮಹದೇವನಾಯಕ ಮತ್ತು ಆರೋಪಿಯ ನಡುವೆ

ಸಂಬಂಧ ಚನ್ನಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ2 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿದಾರರು ಬರೆದ ನಂತರ ಓದಿ ಹೇಳಿರುತ್ತಾರೆ ಎನ್ನುವರು. ನಿಪಿ2 ನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ2 ನ್ನು ಬರೆಯಲು ಘಟನೆಯನ್ನು ನೋಡಿದ ಗ್ರಾಮಸ್ಥರು ಮಾಹಿತಿ ನೀಡಿರುತ್ತಾರೆ. ಗ್ರಾಮಸ್ಥರ ಮಾತನ್ನು ಕೇಳಿ ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುವುದು ಸುಳ್ಳು ಎಂದರೆ ಸರಿಯಲ್ಲ. ಠಾಣೆಯಲ್ಲಿ 2-3 ದಾಖಲೆಗೆ ನಾನು ಸಹಿ ಮಾಡಿರುತ್ತೇನೆ. ಮಹಜರನ್ನು ಠಾಣೆಯಲ್ಲಿ ತಯಾರಿಸಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಮಹಜರಿಗೆ ಚಾಸ2 ರವರು ಸಹಿ ಮಾಡಿರುತ್ತಾರೆ. ಚಾಸ2 ರವರು ಸಹ ಠಾಣೆಯಲ್ಲಿ ಸಹಿ ಮಾಡಿರುತ್ತಾರೆ ಎಂದರೆ ನಾನು ನೋಡಿರುವುದಿಲ್ಲ. ನಾನು ದೂರಿನಲ್ಲಿ ಹೇಳಿರುವಂತೆ ಯಾವುದೇ ಘಟನೆ ನಡೆದಿರುವುದಿಲ್ಲ, 1 ನೇ ಆರೋಪಿಯ ತಾಯಿ ಕಾಂಪೌಂಡ್ ಕಟ್ಟಿದ್ದರಿಂದ ದ್ವೇಷದ ಹಿನ್ನಲೆಯಲ್ಲಿ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಮನೆಯಲ್ಲಿದ್ದ ಎಂಓ 1 ರಿಂದ 3 ವಸ್ತುಗಳನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ